ಸಂಪಾದಕೀಯ



# ಬನ್ನಿ, ಬೆಳಕಿನ ಹಾದಿ ಇಲ್ಲಿದೆ

ಹಲವು ಬಗೆಯ ಗೊಂದಲಗಳಿಗೆ ಒಳಗಾಗಿ ತತ್ತರಿಸುತ್ತಿದ್ದ ಯುವಕನೊಬ್ಬ ಊರಿನ ಹಳೆಯ ಮೇಷ್ಟ್ರ ಬಳಿಗೆ ಹೋಗಿ ಕೇಳಿದ: ''ಸಾರ್, ಸಾಯಬೇಕೆನಿಸುತ್ತಿದೆ. ಇಡೀ ಜೀವನವೇ ವ್ಯರ್ಥ. ಎಲ್ಲಿಗೆ ಹೋದರೂ ಕತ್ತಿನ ತನಕ ಬರುತ್ತಿದೆ. ಏನಾದರೂ ದಾರಿ ಉಂಟೆ?''

ಮೇಷ್ಟ್ರು ಹುಡುಗನನ್ನು ಅಡಿಯಿಂದ ಮುಡಿಯವರೆಗೆ ನೋಡಿದರು. ಯಾವುದೊಂದೂ ಸರಿಯಾಗಿಲ್ಲ ಎನ್ನಿಸಿತು. ''ಏನಾಯಿತು ಮಗೂ? ಯಾಕೆ ಹೀಗಾಗಿದ್ದೀ?'' ಎಂದರು. ಯುವಕ ಬಿಕ್ಕಿ ಬಿಕ್ಕಿ ಅಳತೊಡಗಿದ. ಉದ್ಯೋಗವಿದೆ, ಬೇಕಾದಷ್ಟು ಸಂಬಳ, ಒಳ್ಳೆಯ ಕುಟುಂಬ; ಆದರೂ.... ಯಾಕೋ ಜೀವನ ಸಾಕೆನಿಸಿದೆ. ಸುತ್ತಮುತ್ತ ಎಲ್ಲವೂ ತನ್ನನ್ನೇ ತಿನ್ನಲು ಬರುತ್ತಿದೆಯೆನಿಸಿದೆ. ಮಾನಸಿಕ ಖಿನ್ನತೆ, ಅಂಜಿಕೆ, ಸೋಲಿನ ಭಾವ ಕಾಡುತ್ತಿದೆ – ಎಲ್ಲವನ್ನೂ ವಿವರಿಸಿದ. ಮೇಷ್ಟ್ರು ಏನೋ ಪರಿಹಾರ ಹುಡುಕಬೇಕೆನ್ನುವಷ್ಟರಲ್ಲಿ ಯುವಕನೇ ಕೇಳಿದ – ''ಸಾರ್, ಸ್ವಲ್ಪ ಆಧ್ಯಾತ್ಮಿಕ ಸಾಧನೆ ಮಾಡಬೇಕು ಅನ್ನಿಸುತ್ತಿದೆ. ಧ್ಯಾನ, ಯೋಗ, ಉತ್ತಮವೆಂದು ಯಾರೋ ಹೇಳಿದರು.''

ಮೇಷ್ಟ್ರಿಗೆ ಏನೋ ಒಂದು ಎಳೆ ಸಿಕ್ಕಿದಂತಾಯಿತು. ಒಂದು ಕ್ಷಣ ಯುವಕನತ್ತ ದಿಟ್ಟಿಸಿ ನೋಡಿದರು. ಅವನ ಕಣ್ಣುಗಳಲ್ಲಿ ಕಾತರತೆಯಿತ್ತು. ಮುಳುಗುವವನಿಗೆ ಹುಲ್ಲು ಕಡ್ಡಿಯಾದರೂ ದೊರಕೀತೇ ಎಂಬ ನಿರೀಕ್ಷೆಯಿತ್ತು.

ಒಂದು ಕ್ಷಣ ಆಲೋಚಿಸಿ ಮೇಷ್ಟ್ರು ಹೇಳಿದರು: ''ನಿನಗೆ ನಿಜವಾದ ಆಧ್ಯಾತ್ಮಿಕತೆ ಬೇಕೇ? ಹಾಗಿದ್ದರೆ 'ಶ್ರೀರಾಮಕೃಷ್ಣ ವಚನವೇದ' ಪುಸ್ತಕ ಓದು.''

* * * * *

ಇದೇ ಈ ಕೃತಿಯ ವಿಶೇಷತೆ – ಇದು ಮಾನವನಿಗೆ ಬೆಳಕಿನ ಹಾದಿ ತೋರಿಕೊಡಬಲ್ಲ ಅತ್ಯುತ್ಕೃಷ್ಟ ಗ್ರಂಥ: **'ಶ್ರೀರಾಮಕೃಷ್ಣ ವಚನವೇದ'**. ಕತ್ತಲಿನ ನಿದ್ರೆ, ದುಃಸ್ವಪ್ನದ ಭೀಕರತೆ, ಅಂಧಕಾರದ ಕರಾಳತೆ ಇವನ್ನೆಲ್ಲ ಜಗತ್ತು ಎಷ್ಟೋ ಕಂಡಾಗಿದೆ. ಮಾನವಕೋಟಿ ಹೇಗೆ ಶಾಂತಿ, ನೆಮ್ಮದಿ, ಆನಂದಗಳತ್ತ ಸಾಗಬೇಕು ಎಂಬುದನ್ನು ಅರಿತುಕೊಂಡು ಮುನ್ನಡೆಯಬೇಕಾಗಿದೆ. ನೂರಾರು ಯುದ್ಧಗಳು, ಕ್ರಾಂತಿಗಳು, ಹೊಸ ಅನ್ವೇಷಣೆಗಳು, ರಾಜಕೀಯ–ಸಾಮಾಜಿಕ ಸಂಘರ್ಷಗಳು ಜಗತ್ತಿನಲ್ಲಿ ಆಗಿಹೋಗಿವೆ. ಆದರೆ ಮಾನವನು ಒಟ್ಟಾರೆಯಾಗಿ ಒಂದು ಹೊಸ ಮಾರ್ಗದಲ್ಲಿ ಸಾಗುವುದನ್ನು ಕಲಿಯಲಿಲ್ಲ. ಜ್ಞಾನವೇನಿದ್ದರೂ ಆಯಾ ಪಂಗಡ, ದೇಶ, ಜನಾಂಗಗಳ ಪರಿಧಿಯಲ್ಲೇ ಇದ್ದುಕೊಂಡು, ಅವುಗಳ ಸ್ವಾರ್ಥಕ್ಕಾಗಿಯೇ ಬಳಕೆಯಾಯಿತು. ಜ್ಞಾನವೆಂಬುದು ಇಡೀ ಮನುಕುಲದ ಒಂದು ಸಮಗ್ರ ಅರಿವಾಗಲಿಲ್ಲ. 'ವಿಶ್ವವ್ಯಾಪಕ'ವೆಂದೆಲ್ಲ ದೊಡ್ಡ ಸಿದ್ಧಾಂತಗಳನ್ನು ಹೇಳಿದವರೂ ಮುಂದೆ ಒಂದು ದಿನ ತಮ್ಮ ಪೊಳ್ಳುತನವನ್ನು ಬಚ್ಚಿಡಲಾಗದೆ ಹೋದರು. ಈ ಹಿನ್ನೆಲೆಯಲ್ಲಿ ನೋಡಿದರೆ ಶ್ರೀರಾಮಕೃಷ್ಣರ ಆಗಮನ ಒಂದು ಹೊಸ ದೈವೀ ಅಲೆಯಾಗಿ ಕಂಡುಬರುತ್ತದೆ. ಎಲ್ಲ ಬಗೆಯ ಭೇದ, ಸಂಕುಚಿತ ಭಾವ, ವೈಪರೀತ್ಯ, ಬಿಕ್ಕಟ್ಟು, ವೈರುಧ್ಯಗಳನ್ನು ದಾಟಿ ನಿಂತು, ಮಾನವನು ಅತಿ ಶ್ರೇಷ್ಠ ಸತ್ಯವನ್ನು ತಲುಪುವ ಬಗೆಯನ್ನು ಅವರು ತೋರಿಸಿಕೊಟ್ಟಿದ್ದಾರೆ.

## ಸುಂದರ ಕಥಾಜಗತ್ತು

ಶ್ರೀರಾಮಕೃಷ್ಣರು ತಮ್ಮ ಒಡನಾಡಿ ಭಕ್ತರ ಮುಂದೆ ನಡೆಸುತ್ತಿದ್ದ ಮಾತುಕತೆಗಳ ಸಂಕಲನವೇ 'ಶ್ರೀರಾಮಕೃಷ್ಣ ವಚನವೇದ' ಗ್ರಂಥ. ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯ ಮಹೇಂದ್ರನಾಥ ಗುಪ್ತರು ತಮ್ಮ ಗುರುಗಳು ಆಡುತ್ತಿದ್ದ ಮಾತುಗಳನ್ನೆಲ್ಲ ಗುರುತು ಹಾಕಿಕೊಂಡು, ಅನಂತರ ಮನೆಗೆ ಹೋದಮೇಲೆ ಅದನ್ನೆಲ್ಲ ಒಂದು ಪುಸ್ತಕದಲ್ಲಿ ಬರೆದಿಡುತ್ತಿದ್ದರು. ಅವರ ಉದ್ದೇಶವಿದ್ದುದು, ಮುಂದೆ ತಮಗೆ ಅದು ಉಪಯೋಗಕ್ಕೆ ಬರುವುದು ಎಂದು; ಆದರೆ ಮುಂದೆ ಅದನ್ನೇ ತಾನೇಕೆ ಪ್ರಕಟಿಸಬಾರದು ಅನ್ನಿಸಿತು. ಅದನ್ನು ಐದು ಸಂಪುಟಗಳಲ್ಲಿ ಪ್ರಕಟಿಸಿದಾಗ, ಅದು ಪ್ರಪಂಚದ ಅತಿ ಪ್ರಮುಖ ಆಧ್ಯಾತ್ಮಿಕ ಕೃತಿಗಳಲ್ಲಿ ಒಂದಾಯಿತು.

ಶ್ರೀರಾಮಕೃಷ್ಣರ ಮಾತುಕತೆಗಳನ್ನು ಇಲ್ಲಿ ಓದುತ್ತ ಹೋದಂತೆ ಹತ್ತಾರು ಸಂಗತಿಗಳು ಬರುತ್ತವೆ — ಅವುಗಳ ನಡುವೆ ಆಗಾಗ ಆಧ್ಯಾತ್ಮಿಕ ದಿವ್ಯರತ್ನಗಳು ಮಿಂಚುತ್ತವೆ, ಅವು ನಮ್ಮ ಹೃದಯ ವನ್ನು ಹೊಕ್ಕು ಬೆಳಗುತ್ತವೆ. ವಿಶಾಲ ಗಗನದಲ್ಲಿ ಚಿರಂತನವಾಗಿ ಮಿನುಗುವ ನಕ್ಷತ್ರಗಳಂತೆ ನಮ್ಮ ಅಂತರಂಗದಲ್ಲಿ ಚಿರಸ್ಥಾಯಿ ಯಾಗಿ ನಿಲ್ಲುತ್ತವೆ.

ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಗಮನವನ್ನು ಸೆಳೆಯುವ ವಿಷ ಯವೇ ಇಲ್ಲಿ ಬರುವ ಸುಂದರ ಕಥೆಗಳು. ಅವಾದರೂ ಒಂದೆ ರಡೆ? ಕನ್ನಡದಲ್ಲಿ ಸುಮಾರು ಸಾವಿರದ ಮುನ್ನೂರು ಪುಟಗಳಷ್ಟು (ಎರಡೂ ಸಂಪುಟ ಸೇರಿ) ವಿಸ್ತಾರವಾಗಿರುವ ಈ ಗ್ರಂಥದಲ್ಲಿ ಹೆಚ್ಚು ಕಡಿಮೆ ಪ್ರತಿಯೊಂದು ಪುಟದಲ್ಲೂ ಒಂದಲ್ಲ ಒಂದು ಕಥೆ ಬಂದೇ ಬರುತ್ತದೆ. ಅವೂ ಎಂತೆಂತಹ ಕಥೆಗಳು! ಪ್ರತಿಯೊಂದ ರಲ್ಲೂ ಅರ್ಥಗರ್ಭಿತವಾದ ತತ್ತ್ವ ಅಡಗಿರುತ್ತದೆ. ಆಧ್ಯಾತ್ಮಿಕ ನೀತಿ-ತತ್ತ್ವಗಳನ್ನು ಅವು ಒಳಗೊಂಡಿರುತ್ತದೆ. ಹಾಗೆಂದ ಮಾತ್ರಕ್ಕೆ ಅವು ನಿಸ್ಸಾರವಲ್ಲ; ನಿರ್ಜೀವವಲ್ಲ. ಒಂದೊಂದು ಕಥೆಯೂ ರಸವತ್ತಾಗಿವೆ. ನಮ್ಮ ಚೇತನದ ಚಿಲುಮೆಯನ್ನು ಉಕ್ಕಿಸುತ್ತವೆ. ಓದುವವರನ್ನು ನಗೆಗಡಲಿನಲ್ಲಿ ತೇಲಿಸುತ್ತವೆ. ಇವುಗಳನ್ನು ನೀತಿ ಕಥೆ, ದಾರ್ಶನಿಕ ಕಥೆ, ಪುರಾಣ ಕಥೆ, ದೃಷ್ಟಾಂತ ಕಥೆ, ಪ್ರಾಣಿ -ಪಕ್ಷಿಗಳ ಕಥೆ, ವೇದಾಂತ ಕಥೆ, ಸತ್ಯಕಥೆ ಎಂದೆಲ್ಲ ವಿಂಗಡಿಸಿ ನೋಡಬಹುದು. ಆದರೆ ಅಷ್ಟೆಲ್ಲ ಕಷ್ಟವೇಕೆ? ಸುಮ್ಮನೆ ಕಥೆಗ ಳೆಂದೇ ಓದುತ್ತ ಹೋದರೆ ಸಾಕು. ಅವುಗಳ ಸಾರ ನಮ್ಮ ಮನಸ್ಸಿಗೆ ಇಳಿದರೆ ಸಾಕು. ಕೇವಲ ಹತ್ತು ಪುಟಗಳನ್ನು ಓದಿದರೂ ಕೂಡ, ಈ ಕೃತಿಯು ನಮ್ಮನ್ನು ಬಲವಾಗಿ ಸೆಳೆದುಬಿಡುತ್ತದೆ. ಓದು ನಿಲ್ಲಿಸಬೇಕು ಅನ್ನಿಸುವುದೇ ಇಲ್ಲ. ಕೆಲವು ಕಥೆಗಳು ಪ್ರಾಸಂ ಗಿಕವಾಗಿ ಪುನರಾವರ್ತನೆಯಾಗುವುದಿದೆ; ಆದರೆ ಮಾತಿನ ನಡುವೆ ಅವು ಸಂದರ್ಭಕ್ಕೆ ತಕ್ಕಂತೆ ಬರುವುದರಿಂದ ದೋಷವೆನಿಸುವು ದಿಲ್ಲ. ತಿಳಿದ ಕಥೆಯನ್ನೇ ಮತ್ತೆ ನೆನಪಿಸಿದಂತಾಗುತ್ತದೆ.

## ಸರಳ ಮಾತುಗಳಿಂದ ಅಗಾಧ ಅನುಭವದತ್ತ

ಇಡೀ ಗ್ರಂಥದುದ್ದಕ್ಕೂ ಹತ್ತಾರು ಮಂದಿ ಭಕ್ತರ ನಡುವೆ ಕುಳಿತು ಶ್ರೀರಾಮಕೃಷ್ಣರು ನಡೆಸುವ ಮಾತುಕತೆಗಳೇ ಕಂಡು ಬರುತ್ತವೆ. ನಡುನಡುವೆ ಹಾಡು, ಕೀರ್ತನೆ, ನರ್ತನ, ಆಗಾಗ ಭಾವಸಮಾಧಿಯ ಸ್ಥಿತಿಗೇರಿ ಸ್ತಬ್ಧರಾಗಿಬಿಡುತ್ತಾರೆ, ಶ್ರೀರಾಮ ಕೃಷ್ಣರು. ಕೆಲವೊಮ್ಮೆ ಭಕ್ತರ ಮನೆಗೋ, ಇತರ ಗಣ್ಯರ ಸಂದರ್ಶ ನಕ್ಕೋ ಶ್ರೀರಾಮಕೃಷ್ಣರೇ ಹೋಗುತ್ತಾರೆ. ಅಲ್ಲಿ ಕೂಡ ಮಾತು ಕತೆ, ಊಟ-ತಿಂಡಿ, ಕೀರ್ತನೆ ಇತ್ಯಾದಿ ನಡೆಯುತ್ತವೆ. ಈ ಬಗೆಯ ಸನ್ನಿವೇಶಗಳಲ್ಲಿ ನಡೆಯುವ ಮಾತುಕತೆಗಳು ಶ್ರೀರಾಮ ಕೃಷ್ಣರ ಪ್ರಮುಖ ಉಪದೇಶಗಳನ್ನು ಒಳಗೊಂಡಿವೆ. ಅವರ ಉಪದೇಶಗಳನ್ನು ಮಾತ್ರವೇ ಈ ಗ್ರಂಥದಿಂದ ಪ್ರತ್ಯೇಕಿಸಿ ತೆಗೆಯಬಹುದು; ಹಾಗೆ ಆರಿಸಿ ತೆಗೆದು ಇತರ ಸಂಕಲನ ಗ್ರಂಥ ಗಳನ್ನು ಪ್ರಕಟಿಸಿದ್ದೂ ಇದೆ. ಆದರೆ ಶ್ರೀರಾಮಕೃಷ್ಣರ ವ್ಯಕ್ತಿತ್ವ, ಅವರು ಇದ್ದ ಸನ್ನಿವೇಶ, ಇತರ ವ್ಯಕ್ತಿಗಳೊಂದಿಗೆ ಅವರ ಒಡ ನಾಟ, ರಸವತ್ತಾದ ಸಂಭಾಷಣೆಗಳು — ಇವನ್ನೆಲ್ಲ ಒಟ್ಟಾಗಿ ಓದುತ್ತ ಹೋಗುವುದೇ ಒಂದು ಅನುಭವ. ಅದನ್ನು ಹಾಗೆಯೇ ಓದಿ ಅನುಭವಿಸಬೇಕು.

ಶ್ರೀರಾಮಕೃಷ್ಣರ ಮಾತುಗಳು ಅತ್ಯಂತ ಸರಳ, ಅನೇಕ ಬಾರಿ ಗ್ರಾಮ್ಯ ಶೈಲಿ. ಎಲ್ಲರಿಗೂ ಅರ್ಥವಾಗುವಂತೆ ನೇರ ಮಾತು ಗಳನ್ನು ಆಡುವುದು ಅವರ ಮಾತಿನ ಕ್ರಮ. ಯಾರಿಗೂ ಅವರು ಹೇಳುವ ಉಪದೇಶ, ನೀತಿ, ತತ್ತ್ವಗಳು ಅರ್ಥವಾಗದೆ ಉಳಿ ಯುವುದಿಲ್ಲ. ಶ್ರೀರಾಮಕೃಷ್ಣರು ಹಲವೆಡೆ ಸರಳತೆಯೆಂಬುದು ಒಂದು ಶ್ರೇಷ್ಠ ಗುಣವೆಂದೇ ಹೇಳಿದ್ದಾರೆ. 'ಸರಳತೆಯಿಲ್ಲದಿದ್ದರೆ ಸಾಕ್ಷಾತ್ಕಾರವುಂಟಾಗದು' ಎಂದು ಅವರು ನೇರವಾಗಿ ಹೇಳು ತ್ತಾರೆ. ಸ್ವತಃ ಶ್ರೀರಾಮಕೃಷ್ಣರೇ ಅತ್ಯಂತ ಸರಳ ವ್ಯಕ್ತಿಯಾಗಿದ್ದರು. ಉಡುಪು, ನಡೆ-ನುಡಿ, ಜೀವನಶೈಲಿ ಎಲ್ಲದರಲ್ಲೂ ಅವರು ಅತ್ಯಂತ ಸರಳರು. ಅವರು ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದರು.

ಆದರೆ ಅಷ್ಟೇ ಅಲ್ಲ. ಜೀವನ ಸಂದಿಗ್ಧತೆ, ಸಂಕೀರ್ಣತೆ, ಗೊಂದಲ-ಗಲಿಬಿಲಿ ಯಾವುದನ್ನೂ ಅರಿಯದ ಮುಗ್ಧ ಮಗು ವಿನ ಸರಳತೆಯಲ್ಲ ಅದು; ಜೀವನದ ಅರ್ಥವನ್ನೆಲ್ಲ ಆಳವಾಗಿ ಅರಿತು, ಬದುಕಿನ ಎಲ್ಲ ಸಂಕೀರ್ಣತೆಯನ್ನೂ ಮೀರಿ ನಿಂತು, ಆಧ್ಯಾತ್ಮಿಕ ಸಾಧನೆಗಳಿಂದ ಪ್ರಪಂಚದ ನೆಲೆಯನ್ನು ದಾಟಿ, ಅಗಾಧ ಸತ್ಯಗಳನ್ನು ಕಂಡುಕೊಂಡ ದೇವ-ಮಾನವನ ಸರಳತೆ ಅದು. ಶಿಶು ಸಹಜ ಮುಗ್ಧತೆಗೂ ಈ ಬಗೆಯ ಸರಳತೆಗೂ ಹೋಲಿಕೆಯಿದೆ; ಆದರೆ ಅವೆರಡೂ ಒಂದೇ ಅಲ್ಲ. ಇಲ್ಲಿನ ಮಾತುಕತೆಗಳಲ್ಲಿ ನಡುನಡುವೆ ಯೋಗ, ವೇದಾಂತ, ಭಕ್ತಿ, ಸಾಧನೆ, ಭಗವಂತನ ವಿವಿಧ ದೃಷ್ಟಿಕೋನ — ಇವೆಲ್ಲ ಬರುತ್ತವೆ. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಕಂಡುಬರುವುದು ಶ್ರೀರಾಮ ಕೃಷ್ಣರ ದಿವ್ಯಾನುಭವಗಳ ವಿವರಣೆ. ಆಧ್ಯಾತ್ಮಿಕ ಸ್ತರಗಳಲ್ಲಿ ಎಂತೆಂತಹ ಔನ್ನತ್ಯಗಳಿವೆಯೋ ಅವನ್ನೆಲ್ಲ ಇಲ್ಲಿ ಕಾಣಬಹುದು. ವೇದಗಳ ಸಪ್ತಭೂಮಿಕೆ, ತಂತ್ರ-ಹಠಯೋಗಗಳಲ್ಲಿ ಬರುವ ಷಟ್ಚಕ್ರಗಳ ನಿರೂಪಣೆ, ಯೋಗ-ವೇದಾಂತಗಳಲ್ಲಿ ಬರುವ ನಿರ್ವಿಕಲ್ಪ ಸಮಾಧಿ, ಭಕ್ತಿಮಾರ್ಗದಲ್ಲಿ ಬರುವ ಭಾವ, ಪ್ರೇಮ, ಮಹಾಭಾವ - ಇವನ್ನೆಲ್ಲ ಶ್ರೀರಾಮಕೃಷ್ಣರು ವಿವರಿಸುತ್ತಾರೆ. ಇವು ಬರೀ ವಿವರಣೆಯಲ್ಲ; ಶ್ರೀರಾಮಕೃಷ್ಣರ ಅಸಂಖ್ಯ ಅನು ಭವಗಳ ಹಿನ್ನೆಲೆಯಿಂದ ಮೂಡಿಬಂದ ದಿವ್ಯ ರತ್ನಗಳು.

## ಶುದ್ಧ ಅಧ್ಯಾತ್ಮ ಮಾರ್ಗ

ಪ್ರಪಂಚದಲ್ಲಿ ಹತ್ತಾರು ಪರಂಪರೆಗಳಿಂದ, ಜನಾಂಗಗಳಿಂದ ಹಾಗೂ ಧರ್ಮಗಳಿಂದ ಬೆಳೆದು ಬಂದ ಅಧ್ಯಾತ್ಮ ಮಾರ್ಗಗಳು ಹಲವು ಬಗೆಯಲ್ಲಿ ಜನರನ್ನು ಭಗವಂತನೆಡೆಗೆ ಮುನ್ನಡೆಸುತ್ತವೆ. ಆಯಾ ಹಿನ್ನೆಲೆಗಳಿಗೆ ಅನುಗುಣವಾಗಿ ಅವು ಯಾವುದೋ ಒಂದು ರೀತಿಯಲ್ಲಿ ಒಂದು ತತ್ತ್ವ, ಸಿದ್ಧಾಂತ, ಜನಾಂಗಗಳ ಪರ ವಾಲುತ್ತವೆ; ಅನೇಕ ಬಾರಿ ತಮ್ಮ ಮಾರ್ಗವನ್ನು ಹೊಗಳುವ

ಭರದಲ್ಲಿ ಇತರ ಮಾರ್ಗಗಳನ್ನು ಹಳಿಯುತ್ತವೆ. ಇದರಿಂದ ಅವುಗಳಲ್ಲಿ ಮತಾಂಧತೆ, ಪಕ್ಷಪಾತ, ಜನಾಂಗೀಯ ಧೋರಣೆ ಮುಂತಾದ ಕೆಡುಕುಗಳು ನುಸುಳಿಬಿಡುತ್ತವೆ. ಧರ್ಮ ಪರಂಪರೆಗಳಿಂದ ಜಗತ್ತಿಗೆ ಹಾನಿಯಾಗಿದ್ದರೆ ಅದು ಈ ಕೆಡುಕುಗಳಿಂದ ಮಾತ್ರ; ಧರ್ಮದ ತಿರುಳಾದ ಅಧ್ಯಾತ್ಮದಿಂದಲ್ಲ. ಅಧ್ಯಾತ್ಮ ಯಾವಾಗಲೂ ಪ್ರಪಂಚವನ್ನು ಒಂದಾಗಿಸುತ್ತದೆ, ಪ್ರಪಂಚವನ್ನು ದೈವತ್ವದ ನೆಲೆಗೇರಿಸುತ್ತದೆ. ಶ್ರೀರಾಮಕೃಷ್ಣರಲ್ಲಿ ನಾವು ಕಾಣುವುದು ಈ ಶುದ್ಧ ಅಧ್ಯಾತ್ಮದ ಮಾರ್ಗವನ್ನು. ಧರ್ಮದಲ್ಲಿ ಕಂಡುಬರುವ ಕೆಡುಕುಗಳನ್ನು ನಿವಾರಿಸುವ, ಹಾಗೂ ಶುದ್ಧ ಅಧ್ಯಾತ್ಮವನ್ನಷ್ಟೇ ಅನುಸರಿಸುವ ಅಗತ್ಯವನ್ನು ಶ್ರೀರಾಮಕೃಷ್ಣರು ಹತ್ತು ಹಲವು ಕಡೆ ಒತ್ತುಕೊಟ್ಟು ಹೇಳುತ್ತಾರೆ.

### ಪರಿಪೂರ್ಣತೆಯ ಅತ್ಯುನ್ನತ ಆದರ್ಶ

ಶ್ರೀರಾಮಕೃಷ್ಣರಲ್ಲಿ ನಾವು ಕಾಣಬಹುದಾದ ಒಂದು ವಿಶೇಷತೆಯೇ ಪರಿಪೂರ್ಣತೆ. ಯಾವ ದೃಷ್ಟಿಯಿಂದ ನೋಡಿದರೂ, ಅವರ ಜೀವನದ ಅಥವಾ ಅವರು ಕಂಡುಕೊಂಡ ಆದರ್ಶದ ವಿವಿಧ ಎಳೆಗಳು ಪರಿಸಮಾಪ್ತಿ ಹೊಂದುವುದು ಪರಿಪೂರ್ಣತೆಯಲ್ಲಿ.

೧) ಆಧ್ಯಾತ್ಮಿಕ ದೃಷ್ಟಿ: ಎಲ್ಲ ಮಾರ್ಗಗಳ, ಎಲ್ಲ ಧರ್ಮಗಳ ಸಮನ್ವಯ ಅವರಲ್ಲಿತ್ತು. ಅವರು ಸ್ವತಃ ತಾವೇ ಎಲ್ಲ ಬಗೆಯ ಸಾಧನೆಗಳನ್ನು ಮಾಡಿ, ವಿವಿಧ ಮಾರ್ಗಗಳೆಲ್ಲ ಅಂತಿಮವಾಗಿ ಒಂದೇ ಭಗವಂತನನ್ನು ತಲುಪುವುವು ಎಂದು ಸಾರಿದರು. ಪ್ರಪಂಚದ ಇತಿಹಾಸದಲ್ಲಿ ಹಿಂದೆಂದೂ ಈ ರೀತಿ ಎಲ್ಲ ಆಧ್ಯಾತ್ಮಿಕ ಪಥಗಳ ಮೂಲಕ ಭಗವಂತನ ಸಾಕ್ಷಾತ್ಕಾರವನ್ನು ಹೊಂದಿದ ಉದಾಹರಣೆಗಳಿಲ್ಲ. ಇದರೊಂದಿಗೆ ಜ್ಞಾನ, ಭಕ್ತಿ, ಯೋಗ ಮಾರ್ಗಗಳ ಸಮನ್ವಯ; ದ್ವೈತ, ವಿಶಿಷ್ಟಾದ್ವೈತ, ಅದ್ವೈತ ತತ್ತ್ವಗಳ ಸಮನ್ವಯ, ಶೈವ, ಶಾಕ್ತ, ವೈಷ್ಣವ ಸಂಪ್ರದಾಯಗಳ ಸಮನ್ವಯ ಅವರಲ್ಲಿ ಒಂದು ಪಕ್ವತೆಯನ್ನು ತಂದುಕೊಟ್ಟವು.

೨) ಧಾರ್ಮಿಕ ದೃಷ್ಟಿ: ಶ್ರೀರಾಮಕೃಷ್ಣರು ಧಾರ್ಮಿಕ ಆಚರಣೆಗಳ ವಿವಿಧ ಬಗೆಗಳನ್ನೂ ಅವುಗಳ ಅಗತ್ಯವನ್ನೂ ಒಪ್ಪಿಕೊಳ್ಳುತ್ತಾರೆ; ಆದರೆ ಅವರು ಧಾರ್ಮಿಕ ಭಾವನೆಗಳ ಬಾಹ್ಯ ಚೌಕಟ್ಟನ್ನು ಮೀರಿ ಹೋಗಿದ್ದರು. ಉದಾಹರಣೆಗೆ, ಪೂಜೆ-ಪುನಸ್ಕಾರ, ಹಬ್ಬ-ಹರಿದಿನ, ದೇವರ ವಿವಿಧ ಮೂರ್ತಿಗಳು, ವಿವಿಧ ಆಚರಣೆಗಳು — ಇವುಗಳನ್ನು ಒಪ್ಪಿಕೊಂಡು ಆಚರಿಸಿದರೂ, ಅವರ ಪಾಲಿಗೆ ನಿಜವಾದ ಭಗವಂತ ಭಾವರಾಜ್ಯಕ್ಕೆ ಸೇರಿದವನು. ಅಂತರಂಗದಲ್ಲಿ ದೈವೀಪ್ರಜ್ಞೆಯನ್ನು ಜಾಗೃತಗೊಳಿಸುವುದೇ ಎಲ್ಲ ಧರ್ಮಗಳ, ಎಲ್ಲ ಆಚರಣೆಗಳ ಉದ್ದೇಶವೆಂದು ಅವರು ಕಂಡುಕೊಂಡಿದ್ದರು. ಇದೇ ರೀತಿ ಅವರು ಎಲ್ಲ ಧರ್ಮಗಳನ್ನೂ ಕಂಡರು ಹಾಗೂ ಅನುಸರಿಸಿದರು. ಒಗ್ಗಟ್ಟು, ಸೌಹಾರ್ದ, ಏಕತೆಯನ್ನು ಅವರು ಯಾವಾಗಲೂ ಪುರಸ್ಕರಿಸುತ್ತಿದ್ದರು. ಜನರ ಮನಸ್ಸುಗಳನ್ನು ಒಡೆಯುವ ಮತಾಂಧತೆಯೇ ಮುಂತಾದ ಕೆಡುಕುಗಳನ್ನು ದೂರವಿಡಬೇಕು ಎನ್ನುತ್ತಿದ್ದರು. ಅವರದು ಎಲ್ಲವನ್ನೂ ಒಳಗೊಳ್ಳುವ ಸಾಮರಸ್ಯದ ದೃಷ್ಟಿ. ಭಿನ್ನತೆಗಳನ್ನು ಇಟ್ಟುಕೊಂಡೇ ಸಮರಸದಿಂದಿರಬೇಕು; ಬದಲಾಗಿ ಯಾವುದನ್ನೂ ಕೆಡಹುವ ಅಗತ್ಯವಿಲ್ಲ — ಏಕತೆ ಬರುವುದು ಸಹಬಾಳ್ವೆಯಿಂದ ಮಾತ್ರ ಎಂದು ಅವರು ನಂಬಿದ್ದರು.

೩) ಲೌಕಿಕ ದೃಷ್ಟಿ: ಶ್ರೀರಾಮಕೃಷ್ಣರು ಸಂನ್ಯಾಸಿಗಳಿಗೆ ಹೇಗೆ ಆದರ್ಶಪ್ರಾಯರಾಗಿದ್ದರೋ, ಅದೇ ರೀತಿ ಸಂಸಾರಸ್ಥರಿಗೂ ಆದರ್ಶ ವ್ಯಕ್ತಿಯಾಗಿದ್ದರು. ಸ್ವಾರ್ಥದ, ಕಾಮಭಾವನೆಯ ಲವಲೇಶ ಸ್ಪರ್ಶವೂ ಇಲ್ಲದೆ ಗೃಹಸ್ಥನಾಗಿ ಬದುಕಬಹುದು, ಮಾನವನ ಗುರಿಯಾದ ದೈವೀಸಾಕ್ಷಾತ್ಕಾರವನ್ನು ಹೊಂದಬಹುದು ಎಂಬುದನ್ನು ಸ್ವತಃ ತಾವೇ ಬದುಕಿ ತೋರಿಸಿಕೊಟ್ಟರು. 'ಹೇಳುವುದು ವೇದಾಂತ, ತಿನ್ನುವುದು ಮಣ್ಣು' ಎಂಬ ರೀತಿಯಲ್ಲ ಅವರದು. ಮಾನವ ಜನಾಂಗದಲ್ಲಿ ಅರ್ಧದಷ್ಟು ಭಾಗವಾದ ಸ್ತ್ರೀಯರನ್ನು ಅಬಲೆಯನ್ನಾಗಿಸದೆ, ಮಾತೃಸ್ವರೂಪಿಯಾದ ಜಗನ್ಮಾತೆಯೇ ಅವರು ಎಂದು ಕಂಡರು. ಸ್ತ್ರೀಯರಿಗೂ ಸಾಕ್ಷಾತ್ಕಾರದ ಮಾರ್ಗವನ್ನು ಅವರು ಬೋಧಿಸಿದರು.

### ಹೊಸ ಗಾಳಿ ಬೀಸಿ ಬರುತಿದೆ

ಪ್ರಪಂಚದ ಇತಿಹಾಸದಲ್ಲಿ ಹತ್ತಾರು ಜಾಗತಿಕ ಬದಲಾವಣೆಗಳಾಗಿವೆ. ಅವುಗಳಿಂದ ಜಗತ್ತು ತಲ್ಲಣಗೊಂಡಿದೆ; ಅಂತೆಯೇ ಹೊಸ ಆವಿಷ್ಕಾರಗಳಿಂದ ಅನೇಕ ಬೆಳವಣಿಗೆಗಳೂ ಆಗಿವೆ. ಆದರೆ ಜಗತ್ತನ್ನು ಭೌತಿಕ ನೆಲೆಯಿಂದ ಆಧ್ಯಾತ್ಮಿಕ ಸ್ತರಕ್ಕೇರಿಸಿ, ಸಾಕ್ಷಾತ್ಕಾರದ ಮೂಲಕ ಮಾನವನು ದಿವ್ಯನೆಲೆಯನ್ನು ಕಂಡುಕೊಳ್ಳಬೇಕೆಂಬ ಒಂದು ಮಹಾನ್ ಆದರ್ಶವನ್ನು ಜಗತ್ತಿನ ಮುಂದಿಟ್ಟವರು ಶ್ರೀರಾಮಕೃಷ್ಣರು. ''ಇದು ಸಾಧ್ಯ. ಏಕೆಂದರೆ, ಭಗವಂತನಿದ್ದಾನೆ — ಅವನ ಕೃಪೆಯಿಂದ ಅಸಾಧ್ಯವೂ ಸಾಧ್ಯವಾಗುವುದು'' ಎಂದು ಅವರು ದೃಢವಾಗಿ ನಂಬಿದ್ದರು. ಈ ಬಗೆಯ ಹೊಸ ಅರಿವನ್ನು ಮಾನವಕುಲಕ್ಕೆ ನೀಡುವ ಮೂಲಕ, ಮನುಕುಲವು ಒಂದು ದಿವ್ಯ ಜಗತ್ತನ್ನು ನಿರ್ಮಿಸುವ ಸಾಧ್ಯತೆಯನ್ನು, ಆದರ್ಶವನ್ನು ಅವರು ಪ್ರಪಂಚದ ಮುಂದಿಟ್ಟರು. ಹೊಸ ಗಾಳಿ ಅವರ ಜೀವನದೊಂದಿಗೆ ಬೀಸಿ ಬಂತು; ಕ್ರಮೇಣ ಅದು ಇಡೀ ಪ್ರಪಂಚವನ್ನೇ ವ್ಯಾಪಿಸುವ ಬಿರುಗಾಳಿಯಾಗಿ ಮಾರ್ಪಡಲಿ.

### ಮಾರ್ಚ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಮಂಗಳವಾರ | ಮಹಾಶಿವರಾತ್ರಿ |
| ೪ | ಶುಕ್ರವಾರ | ಶ್ರೀರಾಮಕೃಷ್ಣ ಜಯಂತಿ |
| ೧೪ | ಸೋಮವಾರ | ಏಕಾದಶಿ |
| ೧೮ | ಶುಕ್ರವಾರ | ಶ್ರೀ ಚೈತನ್ಯ ಮಹಾಪ್ರಭು ಜಯಂತಿ |
| ೨೧ | ಸೋಮವಾರ | ಸ್ವಾಮಿ ಯೋಗಾನಂದ ಜಯಂತಿ |
| ೨೮ | ಸೋಮವಾರ | ಏಕಾದಶಿ |